**2ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಮಾಗಡಿ**
**ಕ್ರಿಮಿನಲ್ ಪ್ರಕರಣ ಸಂಖ್ಯೆ -3032/2021**
**ಚಾಸಾ - 07 /** ಪ್ರಾಸಾ **- 06**

| | |
|---|---|
| ಹೆಸರು | **ಮಂಜುಳ** |
| ಗಂಡನ ಹೆಸರು | **ನಾಗರಾಜು** |
| ವಯಸ್ಸು | **43** |
| ಉದ್ಯೋಗ | **ಗೃಹಿಣಿ** |
| ವಿಳಾಸ | **ತಾವರೆಕೆರೆ** |

**ದಿನಾಂಕಃ 26-02-2026 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-**

ಚಾಸಾ-1ರವರು ನನ್ನ ಮೈದುನಾ. ಚಾಸಾ-2ರವರು ನನ್ನ ಮಾವ. ಚಾಸಾ-3ರವರು ನನ್ನ ಅತ್ತೆ. ಆರೋಪಿಗಳು ನಮ್ಮ ಪಕ್ಕದ ಜಮೀನಿನವರು. 2015ನೇ ಇಸವಿಯಲ್ಲಿ ಮನೆಯ ಹಿಂದೆ ಕಾರನ್ನು ನಿಲ್ಲಿಸಿದ್ದೇವು. ಹಿಂದೆ ಹೋಗಲು ರಸ್ತೆಯನ್ನು ಬಿಟ್ಟಿದ್ದೇವು. ಕಾರನ್ನು ನಿಲ್ಲಿಸಿದ್ದಕ್ಕೆ 2ನೇ ಆರೋಪಿಯು ಜಗಳವನ್ನು ಮಾಡಿದರು. ಆಮೇಲೆ ನಾವು ಬೆಂಗಳೂರಿಗೆ ಹೋದೆವು. ಆ ಮೇಲೆ ಪುನಃ ಜಗಳ ಆಯಿತು ಎಂದು ಠಾಣೆಗೆ ದೂರನ್ನು ಕೊಡಲು ಹೋದಾಗ ಚಾಸಾ-2ರವರಿಗೆ ಹೊಡೆದಿರುತ್ತಾರೆ. ನಾನು ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ. ಇಂದು ನ್ಯಾಯಾಲಯದ ಮುಂದೆ ಆರೋಪಿಗಳು ಹಾಜರಿದ್ದಾರೆ. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ನಾನು ಪೋಲೀಸರಿಗೆ ನನ್ನ ಹೇಳಿಕೆಯನ್ನು ನೀಡಿರುತ್ತೇನೆ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**
ಪಾಟೀ **ಸವಾಲುಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-**

ದಿ. 27-09-2015ರಂದು ಸಂಜೆ 5 ಗಂಟೆ ಸಮಯದಲ್ಲಿ ನೀವು ಮತ್ತು ಚಾಸಾ-6ರವರು ಚಾಸಾ-2 ಮತ್ತು 3ರವರನ್ನು ನೋಡಲು ನಿಮ್ಮ ಊರಿಗೆ ಹೋಗಿದ್ದು, ನೀವು ತಂದಿದ್ದ ಕಾರನ್ನು ಚಾಸಾ-1ರವರ ಮನೆಯ ಹಿಂಭಾಗದಲ್ಲಿ ಇರುವ ಜಾಗದಲ್ಲಿ

ನಿಲ್ಲಿಸಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ದಿ.28-09-2015 ರಂದು ಬೆಳಗ್ಗೆ 10.30ರ ಸಮಯದಲ್ಲಿ ನೀವು ಮತ್ತು ಚಾಸಾ-6ರವರು ವಾಪಸ್ಸು ಊರಿಗೆ ಹೋಗಲು ಕಾರನ್ನು ತೆಗೆಯುತ್ತಿದ್ದಾಗ, ಚಾಸಾ-1ರವರ ಪಕ್ಕದ ಮನೆಯ ವಾಸಿಯಾದ 1ನೇ ಆರೋಪಿಯು ಏಕಾಏಕಿಯಾಗಿ ಬಂದು ನಿಮಗೆ, ಚಾಸಾ-1 ರಿಂದ 3 ಮತ್ತು 6ರವರಿಗೆ ಏಕೆ ನಮ್ಮ ಹೊಲದಲ್ಲಿ ಕಾರನ್ನು ನಿಲ್ಲಿಸಿದ್ದೀರಾ ಎಂದು ಬಾಯಿಗೆ ಬಂದಂತೆ ಅವಾಚ್ಯ ಶಬ್ದಗಳಿಂದ ಬೈದು, ಜಗಳ ಮಾಡಿದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

ದಿ.29-09-2015 ರಂದು ಚಾಸಾ-1ರವರು ನಿಮಗೆ ಕರೆ ಮಾಡಿ ತಮಗೂ ಮತ್ತು 1ನೇ ಆರೋಪಿಯವರಿಗೆ ಗಲಾಟೆ ಆಗಿದೆ ಎಂದು ತಿಳಿಸಿದರು, ನಂತರ ನೀವು ಮತ್ತು ಚಾಸಾ- 6ರವರು ಊರಿಗೆ ಹೋಗಿ ವಿಚಾರ ಮಾಡಲಾಗಿ ದಿ.28-09-2015 ರಂದು ಸಂಜೆ 7 ಗಂಟೆ ಸಮಯದಲ್ಲಿ ಚಾಸಾ-1 ಮತ್ತು 2ರವರು ಮನೆಯ ಮುಂದೆ ನಿಂತಿದ್ದಾಗ ಆರೋಪಿಗಳು ಅವರ ಮನೆಯ ಬಳಿ ಹೋಗಿದ್ದರು, 2ನೇ ಆರೋಪಿಯು ನಿಮ್ಮ ಮಕ್ಕಳು ಏಕೆ ಕಾರನ್ನು ತಮ್ಮ ಜಾಗದಲ್ಲಿ ನಿಲ್ಲಿಸಿದ್ದು, ನಿಮ್ಮ ಅಪ್ಪನದಾ ಜಾಗ ಎಂದು ಅವಾಚ್ಯ ಶಬ್ದಗಳಿಂದ ಬೈದು, ಕೈಯಿಂದ ಹೊಡೆದು ಇನ್ನೊಂದು ಸಾರಿ ತಮ್ಮ ತಂಟೆಗೆ ಬಂದರೆ ಸಾಯಿಸಿ ಬಿಡುತ್ತೇನೆ ಎಂದು ಪ್ರಾಣ ಬೆದರಿಕೆ ಹಾಕಿದರು ಎಂದು ತಿಳಿಸಿದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

ಸದರಿ ವಿಷಯದ ಬಗ್ಗೆ ದಿ.29-09-2015 ರಂದು ಚಾಸಾ-1ರವರು ದೂರನ್ನು ನೀಡಲು ಹೋದಾಗ ಅವರ ಜೊತೆ ನೀವು ಮತ್ತು ಚಾಸಾ-2ರವರು ಸಹ ಹೋಗಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನಂತರ ಚಾಸಾ-1ರವರು ಹೊಲದ ದಾಖಲೆಗಳನ್ನು ತೆಗೆದುಕೊಂಡು ಬರಲು ಮನೆಯ ಬಳಿ ಹೋದಾಗ ಆರೋಪಿಗಳು ಪುನಃ ಚಾಸಾ-1ರವರನ್ನು ಅಡ್ಡಗಟ್ಟಿದರು, 1ನೇ ಆರೋಪಿಯು ಚಾಸಾ-1ರವರ ಎಡಗೈಗೆ ಕೈಯಿಂದ ಹೊಡೆದರು ಮತ್ತು ಇಬ್ಬರನ್ನು ಠಾಣೆಗೆ ಕರೆಯಿಸಿ ಇಬ್ಬರಿಗೂ ಬುದ್ದಿವಾದ ಹೇಳಿ ತೀರ್ಮಾನ ಮಾಡಲಾಯಿತು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನಂತರ ಚಾಸಾ-1ರಿಂದ 3 ಮತ್ತು ಲೀಲಾವತಿಯವರು ವಾಪಸ್ಸು ಮನೆಗೆ ಹೋಗುತ್ತಿರುವಾಗ 1ನೇ ಆರೋಪಿಯು ಮತ್ತೆ ಗಲಾಟೆ ಮಾಡಿದ್ದು, 2 ಮತ್ತು 7ನೇ ಆರೋಪಿಗಳು ಚಾಸಾ-

2 ಮತ್ತು 3ರವರಿಗೆ ಕೈಗಳಿಂದ ಹೊಡೆದರು, ಉಳಿದವರು ಸಹ ಅವಾಚ್ಯ ಶಬ್ದಗಳಿಂದ ಬೈದು ಕೈಗಳಿಂದ ಹೊಡೆದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಚಾಸಾ-1ರವರು ಸುಮುಖ ಕ್ಲಿನಿಕ್ ಮತ್ತು ಆಸ್ಪತ್ರೆಯಲ್ಲಿ ಹೊರ ರೋಗಿಯಾಗಿ ಚಿಕಿತ್ಸೆಯನ್ನು ಪಡೆದುಕೊಂಡರು ಎಂದರೆ ಸಾಕ್ಷಿಯು ಹೌದು ಎನುನತ್ತಾರೆ. ಚಾಸಾ-2 ಮತ್ತು 3ರವರು ಯಾವುದೇ ಆಸ್ಪತ್ರೆಯಲ್ಲಿ ಒಳ ರೋಗಿಯಾಗಿ ಚಿಕಿತ್ಸೆಯನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ನೀವು ದಿ. 02-02-2021 ರಂದು ನಿಮ್ಮ ಹೇಳಿಕೆಯನ್ನು ನೀಡಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

ಪಾಟೀ **ಸವಾಲುಃ- ಆರೋಪಿಗಳ ಪರ ಶ್ರೀ.ಬಿ. ಇ. ಆರ್, ವಕೀಲರಿಂದಃ-**

01. ನಾವು ಯಾವ ದಿನಾಂಕದಂದು ಊರಿಗೆ ಬಂದಿದ್ದೇವು ಎಂದು ನನಗೆ ಗೊತ್ತಿಲ್ಲ. ನೀವು ನಿಮ್ಮ ಊರಿಗೆ ಬಂದಿರುವುದಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಕೃತ್ಯ ನಡೆದ ಸ್ಥಳದ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ನಾನು ಮತ್ತು ಚಾಸಾ-6ರವರು ಬೆಂಗಳೂರಿನಲ್ಲಿ ವಾಸಿಸುತ್ತಿದ್ದೇವು. ಹಬ್ಬ ಮತ್ತು ಯಾವುದಾದರೂ ವಿಶೇಷ ದಿನಗಳಲ್ಲಿ ಮಾತ್ರ ನೀವು ಊರಿಗೆ ಬಂದಿರುತ್ತೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಚಾಸಾ-1ರಿಂದ 3ರವರು ನಿಮ್ಮ ಕುಟುಂಬದವರು ಆಗಿರುವ ಕಾರಣದಿಂದ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ನೀವು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನಾನು ನನ್ನ ಹೇಳಿಕೆಯನ್ನು ಪೋ. ಠಾಣೆಯಲ್ಲಿ ನೀಡಿರುತ್ತೇನೆ. ನನ್ನ ಹೇಳಿಕೆಯಲ್ಲಿ ಇರುವ ವಿಷಯದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನೀವು ನಿಮ್ಮ ಹೇಳಿಕೆಗೆ ಮಾಹಿತಿಯನ್ನು ನೀಡಿರುವುದಿಲ್ಲ ಮತ್ತು ಪೋಲೀಸರು ಬರೆದಿದ್ದ ಹಾಳೆಗಳಿಗೆ ನಿಮ್ಮ ಸಹಿಯನ್ನು ಪಡೆದುಕೊಂಡರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

02. ಆರೋಪಿಗಳು ಮತ್ತು ಚಾಸಾ-1 ರಿಂದ 3, 6ರ ನಡುವೆ ಸಿವಿಲ್ ವ್ಯಾಜ್ಯವು ಇತ್ತು ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಓ. ಎಸ್ ಸಂ. 174/2007 ರಂತೆ ಆರೋಪಿಗಳು ಚಾಸಾ-1ರಿಂದ 3 ರವರ ವಿರುದ್ದ ದಾವೆಯನ್ನು ಸಲ್ಲಿಸಿದ್ದರು ಮತ್ತು ಸದರಿ ದಾವೆಯು ಅವರ ಪರವಾಗಿ ಡಿಕ್ರಿ ಆಗಿತ್ತು ಎಂದರೆ ಸಾಕ್ಷಿಯು ಸರಿಯಲ್ಲ

ಎನ್ನುತ್ತಾರೆ. ಆಗಾಗಿ ನೀವು ದುರುದ್ದೇಶವನ್ನು ಇಟ್ಟುಕೊಂಡು ಚಾಸಾ-1ರಿಂದ 3ರವರ ಪರವಾಗಿ ಸಾಕ್ಷಿ ನುಡಿಯುತ್ತಿದ್ದೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಚಾಸಾ-1ರವರ ಮೇಲೆ ಯಾರೂ ಸಹ ಹಲ್ಲೆಯನ್ನು ಮಾಡಿರುವುದಿಲ್ಲ, ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಯಾವುದೇ ಕೃತ್ಯವು ನಡೆಯದೇ ಇದ್ದರೂ ಸಹ ಚಾಸಾ-1ರಿಂದ 3ರವರಿಗೆ ಸಹಾಯ ಮಾಡಲು ನೀವು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

**ಮರು ವಿಚಾರಣೆ- ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**2ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ, ಮಾಗಡಿ.**

**2ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಮಾಗಡಿ**
**ಕ್ರಿಮಿನಲ್ ಪ್ರಕರಣ ಸಂಖ್ಯೆ -3032/2021**
**ಚಾಸಾ - 04 /** ಪ್ರಾಸಾ **- 07**

| | |
|---|---|
| ಹೆಸರು | **ಮರಿಯಪ್ಪ** |
| ಗಂಡನ ಹೆಸರು | **ವಾಪಣ್ಣ** |
| ವಯಸ್ಸು | **76** |
| ಉದ್ಯೋಗ | **ವ್ಯವಸಾಯ** |
| ವಿಳಾಸ | **ತಾವರೆಕೆರೆ** |

**ದಿನಾಂಕಃ 26-02-2026 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-**

ಈಗ ಸಾಕ್ಷಿಗೆ ನಿಪಿ-3ನ್ನು ತೋರಿಸಿದ್ದು, ಅದರಲ್ಲಿ ಇರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿ-3(ಸಿ) ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ನಿಪಿ-2ನ್ನು ತೋರಿಸಿದ್ದು ಅದರಲ್ಲಿ ಇರುವ ತನ್ನಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. 2020 ಅಥವಾ 2021 ನೇ ಇಸವಿಯಲ್ಲಿ ಗಲಾಟೆಯ ವಿಷಯಕ್ಕೆ ಪೋಲೀಸರು ಸ್ಥಳದಲ್ಲಿ ಪಂಚನಾಮೆಯನ್ನು ಮಾಡಿದಾಗ ನಾನು ನಿಪಿ-1 ಮತ್ತು 2ಕ್ಕೆ ನನ್ನ ಸಹಿಯನ್ನು ಹಾಕಿರುತ್ತೇನೆ. ಕಾರನ್ನು ದಾರಿಯಲ್ಲಿ ನಿಲ್ಲಿಸಿದ್ದ ವಿಷಯಕ್ಕೆ ಗಲಾಟೆಯನ್ನು ಮಾಡಿಕೊಂಡಿದ್ದಾರೆ ಎಂದು ಹೇಳಿದರು ಮತ್ತು ಆ ಸಮಯದಲ್ಲಿ ನಾನು ಇರಲಿಲ್ಲ. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ನಾನು ಪೋಲೀಸರಿಗೆ ನನ್ನ ಹೇಳಿಕೆಯನ್ನು ನೀಡಿರುತ್ತೇನೆ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

ಪಾಟೀ **ಸವಾಲುಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ:-**

ದಿ. 28-08-2015 ರಂದು ಬೆಳಗ್ಗೆ 10.30ರ ಗಂಟೆ ಸಮಯದಲ್ಲಿ ನೀವು ಚಾಸಾ-1ರವರ ಜಮೀನಿನ ಬಳಿ ನಿಂತಿದ್ದಾಗ 1ನೇ ಆರೋಪಿಯು ಚಾಸಾ-6ರವರು ಅವರ ಜಾಗದಲ್ಲಿ ಕಾರನ್ನು ನಿಲ್ಲಿಸಿದ್ದಾರೆ ಎಂಬ ವಿಚಾರದಲ್ಲಿ ಗುಂಪುಕಟ್ಟಿಕೊಂಡು ಬಂದು

ಏಕಾಏಕಿ ಚಾಸಾ-1 ರಿಂದ 3 ಮತ್ತು 7 ರವರಿಗೆ ಅವಾಚ್ಯ ಶಬ್ದಗಳಿಂದ ಬೈದರು ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನಂತರ ಅವರುಗಳು ಏನೂ ಮಾತನಾಡದೇ ವಾಪಸ್ಸು ಕಾರನ್ನು ತೆಗೆದುಕೊಂಡು ಬೆಂಗಳೂರಿಗೆ ಹೋದರು ಮತ್ತು ನೀವು ಸಹ ಅಲ್ಲಿಂದ ಹೊರಟು ಹೋಗಿರುತ್ತೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ದಿ.28-09-2015 ರಂದು ರಾತ್ರಿ 8.45 ಗಂಟೆಗೆ ಚಾಸ-ಾ1ರವರು ನಿಮಗೆ ಫೋನ್ ಮಾಡಿ ಈ ದಿನ ಸಂಜೆ 7 ಗಂಟೆ ಸಮಯದಲ್ಲಿ ಚಾಸಾ-2 ಮತ್ತು 3ರವರು ಇಬ್ಬರೇ ಮನೆಯ ಮುಂದೆ ನಿಂತಿದ್ದಾಗ ಆರೋಪಿಗಳು ನಿಮ್ಮ ಮನೆಯ ಬಳಿ ಬಂದರು, 2ನೇ ಆರೋಪಿ ನಿಮ್ಮ ಮಕ್ಕಳು ಏಕೆ ಕಾರನ್ನು ನಮ್ಮ ಜಾಗದಲ್ಲಿ ನಿಲ್ಲಿಸಿದ್ದಾರೆ ಎಂದು ಅವಾಚ್ಯ ಶಬ್ದಗಳಿಂದ ಬೈದರು, ಕೈ ಯಿಂದ ಹೊಡೆದು ಇನ್ನೊಂದು ಸಾರಿ ನಮ್ಮ ತಂಟೆಗೆ ಬಂದರೆ ನಿಮ್ಮನ್ನು ಸಾಯಿಸಿ ಬಿಡುತ್ತೇವೆ ಎಂದು ಚಾಸಾ-2 ಮತ್ತು 3ರವರಿಗೆ ಪ್ರಾಣ ಬೆದರಿಕೆ ಹಾಕಿದರು ಎಂದರೆ ಸಾಕ್ಷಿಯು ಗೊತ್ತಿಲ್ಲ ಎನ್ನುತ್ತಾರೆ.

ದಿ.29-09-2015ರಂದು ಚಾಸಾ-1ರವರು ತಾವರೆಕೆರ ಪೋ. ಠಾಣೆಗೆ ಹೋಗಿದ್ದು, ನೀವು ಚಾಸಾ-5 ಮತ್ತು ಚಾಸಾ-1ರವರು ಠಾಣೆಗೆ ಹೋಗಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನಂತರ ಚಾಸಾ-1ರವರು ಹೊಲದ ದಾಖಲೆಗಳನ್ನು ತೆಗೆದುಕೊಂಡು ಬರಲು ಮನೆಯ ಬಳಿ ಹೋಗಿದ್ದಾಗ, ಪುನಃ ಚಾಸಾ1ರವರನ್ನು ಅಡ್ಡಗಟ್ಟಿ 1ನೇ ಆರೋಪಿಯು ಚಾಸಾ-1ರವರ ಎಡಗೈ ಗೆ ಹೊಡೆದಿದ್ದು, ನಂತರ ಇಬ್ಬರನ್ನು ಠಾಣೆಗೆ ಕರೆಯಿಸಿ ಇಬ್ಬರಿಗೆ ಬುದ್ದಿವಾದ ಹೇಳಿ ತೀರ್ಮಾನ ಮಾಡಿ ಕಳುಹಿಸಿದರು ಎಂದರೆ ಸಾಕ್ಷಿಯು ತಾನು ಇಬ್ಬರನ್ನು ಕಳುಹಿಸಿದ್ದೇನೆ ಎನ್ನುತ್ತಾರೆ. ನಂತರ ಚಾಸಾ-1ರಿಂದ 3ರವರು ವಾಪಸ್ಸು ಮನೆಗೆ ಹೋಗುತ್ತಿದ್ದಾಗ ಮತ್ತೆ 1ನೇ ಆರೋಪಿಯು ಗಲಾಟೆ ಮಾಡಿದರು, 2 ಮತ್ತು 7ನೇ ಆರೋಪಿಗಳು ಚಾಸಾ-2 ಮತ್ತು 3ರವರ ಕೈಗಳಿಗೆ ಹೊಡೆದು ಹಾಗೂ ಉಳಿದ ಎಲ್ಲರಿಗೂ ಅವಾಚ್ಯ ಶಬ್ದಗಳಿಂದ ಬೈದು ಕೈಗಳಿಂದ ಹೊಡೆದರು ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ನೀವು ದಿ. 02-02-2021 ರಂದು ನಿಮ್ಮ ಹೇಳಿಕೆಯನ್ನು ನೀಡಿರುತ್ತೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

ಪಂಚನಾಮೆಗೆ ಸಹಕರಿಸುವಂತೆ ಹೇಳಿ ದಿ.02-02-2021 ರಂದು ಪೋಲೀಸರು ನಿಮಗೆ, ಚಾಸಾ-1 ಮತ್ತು 5ರವರಿಗೆ ನಿಪಿ-3ರಂತೆ ನೋಟಿಸ್ ನ್ನು ನೀಡಿದರು ಎಂದರೆ

ಸಾಕ್ಷಿಯು ಹೌದು ಎನ್ನುತ್ತಾರೆ. ಅದೇ ದಿನದಂದು ಸಂಜೆ 4 ರಿಂದ 5 ಗಂಟೆ ಸಮಯದಲ್ಲಿ ಚಾಸಾ-1ರವರು ತೋರಿಸಿದ ಜಾಗದಲ್ಲಿ ಪೋಲೀಸರು ನಿಪಿ-2ರಂತೆ ಪಂಚನಾಮೆಯನ್ನು ಮಾಡಿ ನಿಮ್ಮ, ಚಾಸಾ-1 ಮತ್ತು 5ರವರ ಸಹಿಯನ್ನು ಪಡೆದುಕೊಂಡರು ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಸದರಿ ಕೃತ್ಯವು ನಡೆದು ಸುಮಾರು 11 ವರ್ಷ ಮತ್ತು ಪಂಚನಾಮೆಯನ್ನು ಮಾಡಿ ಸುಮಾರು 4 ವರ್ಷ ಆಗಿರುವ ಕಾರಣದಿಂದ ಈ ಮೇಲೆ ಹೇಳಿರುವ ವಿಷಯವನ್ನು ನೀವು ಮರೆತ್ತಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

ಪಾಟೀ **ಸವಾಲುಃ- ಆರೋಪಿಗಳ ಪರ ಶ್ರೀ.ಬಿ. ಇ. ಆರ್, ವಕೀಲರಿಂದಃ-**

ಪಂಚನಾಮೆಗೆ ಬರುವಂತೆ ಹೇಳಿ ಪೋಲೀಸರು ನನಗೆ ಯಾವುದೇ ನೋಟಿಸನ್ನು ನೀಡಿರುವುದಿಲ್ಲ. ಕೃತ್ಯ ನಡೆದ ಸಮಯದಲ್ಲಿ ನಾನು ಇರಲಿಲ್ಲ. ನಿಪಿ-2ರಲ್ಲಿ ಇರುವ ವಿಷಯವನ್ನು ಮೊದಲೇ ಬರೆಯಲಾಗಿತ್ತು ಮತ್ತು ನಿಮ್ಮ ಸಮಕ್ಷಮದಲ್ಲಿ ಯಾವುದೇ ಪಂಚನಾಮೆಯನ್ನು ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಚಾಸಾ-1ರಿಂದ 3ರವರು ನನ್ನ ಸಂಬಂಧಿಕರು ಆಗಿರುವುದಿಲ್ಲ, ಆದರೆ ನನಗೆ ಅವರ ಪರಿಚಯವಿದೆ. ಚಾಸಾ-1 ರಿಂದ 3ರವರು ನಿಮ್ಮ ಪರಿಚಯಸ್ತರು ಆಗಿರುವ ಕಾರಣದಿಂದ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

**ಮರು ವಿಚಾರಣೆ- ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**2ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ, ಮಾಗಡಿ.**